ದಿನಾಂಕಃ 04.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 2 ನೇ ಪ್ರತಿವಾದಿಯರ ಪರ ಶ್ರೀ. ಎಸ್ ಆರ್ ಎಸ್ ವಕೀಲರಿಂದಃ**

ನಮ್ಮ ಅಜ್ಜ ಶಿವನಾಯಕ ಒಕ್ಕಲುತನ ಮಾಡುತ್ತಿದ್ದಿಲ್ಲ ಎಂದರೆ ಸರಿಯಲ್ಲ. ನಮ್ಮ ಅಜ್ಜ ನಮ್ಮ ಕುಟುಂಬವನ್ನು ನಿರ್ವಹಿಸಲು ಬೇರೆಯವರಿಂದ ಸಾಲ ಪಡೆದಿದ್ದ ಎಂದರೆ ಸರಿಯಲ್ಲ. ನಮ್ಮ ಅಜ್ಜ ಶಿವನಾಯಕ ತೀರಿಕೊಂಡಾಗ ನನಗೆ 17 ವರ್ಷ ವಯಸ್ಸು ಇತ್ತು. ಆತನಿಗೆ ಯಾವುದೇ ಸ್ವತಂತ್ರ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಅಜ್ಜ ಶಿವನಾಯಕನು 2ನೇ ಪ್ರತಿವಾದಿಯಿಂದ ರೂ. 4,65,000/- ಸಾಲ ಪಡೆದಿದ್ದ ಎಂದರೆ ಸರಿಯಲ್ಲ. ಆ ಬಗ್ಗೆ ದಿ. 16.04.1998 ರಂದು ಕರಾರು ಪತ್ರ ಬರೆದುಕೊಟ್ಟಿರುತ್ತಾನೆಂದರೆ ಸರಿಯಲ್ಲ.

ಸನ್ 1998 ರಲ್ಲಿ ನಾನು ಇನ್ನು ಜನಿಸಿರಲಿಲ್ಲ. ಆದ್ದರಿಂದ ನಮ್ಮ ಅಜ್ಜ ಸಾಲ 2 ನೇ ಪ್ರತಿವಾದಿಯಿಂದ ಸಾಲ ಪಡೆದುಕೊಂಡ ಬಗ್ಗೆಯಾಗಲೀ, ಕರಾರ ಪತ್ರ ಬರೆದುಕೊಟ್ಟ ಬಗ್ಗೆಯಾಗಲೀ ಮಾಹಿತಿ ಇರುವುದಿಲ್ಲ ಎಂದರೆ ನಿಜ. ಶಿವನಾಯಕ ಸರ್ವೆ ನಂಬರ 331 ರಲ್ಲಿ 14 ಜನರಿಗೆ ತುಂಡು ತುಂಡು ಜಮೀನುಗಳನ್ನಾಗಿ ಮಾಡಿ ಮಾರಾಟ ಮಾಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ 331 ರಲ್ಲಿ ಒಟ್ಟು 10 ಜನರು ಮನೆಗಳನ್ನು ಕಟ್ಟಿಸಿರುತ್ತಾರೆಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ 331 ರಲ್ಲಿ ರಸ್ತೆ , ನೀರಿನ ಸೌಲಭ್ಯ, ವಿದ್ಯುತ್ ಸಂಪರ್ಕವನ್ನು ಪಂಚಾಯತಿಯವರು ಮಾಡಿರುತ್ತಾರೆಂದರೆ ನಿಜ. ಸದರಿ ಸರ್ವೆ ನಂಬರ 331 ರಲ್ಲಿ 02 ಎಕರೆ ಜಮೀನು ಖಾಲಿ ಉಳಿದಿರುತ್ತದೆಂದರೆ ನಿಜ. ಸದರಿ 02 ಎಕರೆ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆಯುವುದಿಲ್ಲ ಎಂದರೆ ನಿಜ.

ನಮ್ಮ ಮನೆಯ ದೈನಂದಿನ ಖರ್ಚಿಗಾಗಿ 2 ನೇ ಪ್ರತಿವಾದಿ ನಮಗೆ ಹಣ ವನ್ನು ಕೊಡುತ್ತಿದ್ದನು ಎಂದರೆ ಸರಿಯಲ್ಲ. ನಮ್ಮ ತಾಯಿ ನನ್ನ ಜೊತೆಯಲ್ಲಿ ನಮ್ಮ ಮನೆಯಲ್ಲಿ ವಾಸವಾಗಿರುತ್ತಾಳೆಂದರೆ ನಿಜ. ನಮ್ಮ ತಾಯಿಯ ಮದುವೆಯನ್ನು ಸಹ 2 ನೇ ಪ್ರತಿವಾದಿ ತನ್ನ ಖರ್ಚಿನಿಂದ ಮಾಡಿರುತ್ತಾನೆಂದರೆ ಸರಿಯಲ್ಲ. ನನ್ನ ತಾಯಿಯ ಮದುವೆಯ ಆಮಂತ್ರಣ ಪತ್ರಿಕೆಯನ್ನು ನಾನು ನೋಡಿರುವುದಿಲ್ಲ. ಸದರಿ ಆಮಂತ್ರಣ ಪತ್ರಿಕೆಯಲ್ಲಿ 2ನೇ ಪ್ರತಿವಾದಿ ಮತ್ತು ಆತನ ಹೆಂಡತಿಯು ಮದುವೆಯನ್ನು ನೇರವೇರಿಸಿದ ಬಗ್ಗೆ ಅವರ ಹೆಸರುಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಶಿವನಾಯಕ ತೀರಿಕೊಂಡಾಗ ನಮ್ಮ ಕುಟುಂಬವು ಬಡತನದ ಸ್ಥಿತಿಯಲ್ಲಿತ್ತು ಎಂದರೆ ಸರಿಯಲ್ಲ. ನನ್ನ ಅಜ್ಜ ಶಿವನಾಯಕ ಸನ್ 2017 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಸನ್ 2010 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಕುಟುಂಬದಲ್ಲಿ ದುಡಿಯುವ ವ್ಯಕ್ತಿ ಯಾರೂ ಇರಲಿಲ್ಲ ಎಂದರೆ ಸಾಕ್ಷಿಯು ಹೊಲ ಇತ್ತು ಎಂದು ನುಡಿಯುತ್ತಾರೆ. ಸದರಿ ಹೊಲ ಮುನ್ಯಾಳ ಗ್ರಾಮದಲ್ಲಿ ಇರುತ್ತದೆ. ಅದರ ಸರ್ವೆ ನಂಬರ ನನಗೆ ಹೇಳಲು ಆಗುವುದಿಲ್ಲ. ಸದರಿ ಜಮೀನಿನಿನಲ್ಲಿ 05 ಹಿಸ್ಸೆಗಳು ಇರುತ್ತವೆ ಎಂದರೆ ಸಾಕ್ಷಿಯು ನಮ್ಮ ತಂದೆಯ ಹಿಸ್ಸೆಗೆ 02 ಎಕರೆ ಜಮೀನು ಇತ್ತು ಎಂದು ನುಡಿಯುತ್ತಾರೆ. ಸದರಿ 02 ಎಕರೆ ಜಮೀನಿನಲ್ಲಿ ಬರುತ್ತಿರುವ ಆದಾಯ ನಮ್ಮ ಕುಟುಂಬದ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ.

2ನೇ ಪ್ರತಿವಾದಿಯು ನನ್ನ ತಾಯಿಗೆ ಪ್ರತಿ ತಿಂಗಳು ರೂ.5 ಸಾವಿರ ಮನಿಯಾರ್ಡರ ಕಳುಹಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಮನಿಯಾರ್ಡರ ಮಾಡಿದ ಬಗ್ಗೆ ದಾಖಲೆಗಳನ್ನು 2 ನೇ ಪ್ರತಿವಾದಿಯು ಹಾಜರುಪಡಿಸಿದ್ದು, ಅವುಗಳ ಬಗ್ಗೆ ನಾನು ವಕೀಲರಿಗೆ ಕೇಳಿ ತಿಳಿದುಕೊಂಡಿರುವುದಿಲ್ಲ. ನನ್ನ ಮದುವೆಯಾಗುವುದಕ್ಕಿಂತ ಮುಂಚೆ ನಮ್ಮ ಮನೆಯ ಖರ್ಚಿಗಾಗಿ 2 ನೇ ಪ್ರತಿವಾದಿ

ಪ್ರತಿ ತಿಂಗಳು ರೂ.5 ಸಾವಿರ ಹಣವನ್ನು ಕಳುಹಿಸುತ್ತಿದ್ದ ಎಂದರೆ ಸಾಕ್ಷಿಯು 04 ತಿಂಗಳಿಗೊಮ್ಮೆ ಅಥವಾ 6 ತಿಂಗಳಿಗೊಮ್ಮೆ ರೂ.2,000/- ಕೊಡುತ್ತಿದ್ದ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ನಿರ್ವಹಣೆಗೆ ಸಾಕಾಗುವಷ್ಟು ನಮಗೆ ಆದಾಯ ಇದ್ದು, ಆತನು ಕೊಡುವ ಹಣ ನಮಗೆ ಅವಶ್ಯಕತೆ ಇರುವುದಿಲ್ಲ ಎಂದು ಸದರಿ ಹಣವನ್ನು ತೆಗೆದುಕೊಳ್ಳಲು ನಾವು ನಿರಾಕರಿಸಿರುವುದಿಲ್ಲ. ನಮಗೆ ಹಣದ ಅವಶ್ಯಕತೆ ಇದುದ್ದರಿಂದ ಸದರಿ ಹಣವನ್ನು 2ನೇ ಪ್ರತಿವಾದಿಯಿಂದ ಸ್ವೀಕರಿಸಿರುತ್ತೇವೆ ಎಂದರೆ ನಿಜ. ನನ್ನ ಅಜ್ಜ ಶಿವನಾಯಕ ತೀರಿಕೊಂಡ ನಂತರ ಆತನ ಮರಣೋತ್ತರ ಕ್ರಿಯೆಗಳನ್ನು ಸ್ವತಃ 2ನೇ ಪ್ರತಿವಾದಿ ನಿಂತು ಖರ್ಚು ಮಾಡಿರುತ್ತಾನೆಂದರೆ ಸರಿಯಲ್ಲ.

2 ನೇ ಪ್ರತಿವಾದಿ ತನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳನ್ನು ನಾನು ನೋಡಿಲ್ಲ. ನನ್ನ ಅಜ್ಜ ಶಿವನಾಯಕನು 2 ನೇ ಪ್ರತಿವಾದಿಯಿಂದ ದಿ.10.07.2004 ರಂದು ರೂ. 1,18,000/-, ದಿ.08.08.2005 ರಂದು ರೂ. 88 ಸಾವಿರ ಹಾಗೂ ದಿ. 28.08.2006 ರಂದು ರೂ.1,18,000/- ಗಳನ್ನು ಪಡೆದಿರುತ್ತಾನೆಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಹಣವನ್ನು 2 ನೇ ಪ್ರತಿವಾದಿ ನಮ್ಮ ಅಜ್ಜನಿಗೆ ಕೊಡುವಾಗ ನನ್ನ ವಯಸ್ಸು 4-6 ವರ್ಷ ವಯಸ್ಸು ಇದ್ದು, ಆದ್ದರಿಂದ ನನಗೆ ಸದರಿ ಸಂಗತಿಯ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ನಿಜ. 2 ನೇ ಪ್ರತಿವಾದಿ ಹಾಗೂ ನನ್ನ ಅಜ್ಜನ ಮದ್ಯೆ ಆದ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರದೇ ಇದ್ದರೂ ಸಹ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ತಾಯಿಯು 2 ನೇ ಪ್ರತಿವಾದಿ ವಿರುದ್ಧ ಅಸಲು ದಾವಾ ನಂಬರ 436/2020 ನೇದ್ದನ್ನು ದಾಖಲಿಸಿರುತ್ತಾಳೆಂದರೆ ನಿಜ. ಸದರಿ ಪ್ರಕರಣದಲ್ಲಿ ನನ್ನ ತಾಯಿ ಸಾಕ್ಷ್ಯ ನುಡಿದಿದ್ದು, ಅದನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

ನನ್ನ ಮದುವೆಯನ್ನು 2 ನೇಪ್ರತಿವಾದಿ ಮಾಡಿರುತ್ತಾನೆಂದರೆ ಸಾಕ್ಷಿ ನನ್ನ ತಾಯಿ ಮಾಡಿರುತ್ತಾಳೆಂದು ನುಡಿಯುತ್ತಾರೆ. ಸಾಕ್ಷಿಗೆ ತನ್ನ ತಾಯಿಯ ಮದುವೆಯ ಆಮಂತ್ರಣ ಪತ್ರಿಕೆಯನ್ನು ತೋರಿಸಿ ಅದರಲ್ಲಿ ಮದುವೆಯನ್ನು ಯಾರು ಮಾಡಿರುತ್ತಾರೆಂದು ಕೇಳಲಾಗಿ ಸಾಕ್ಷಿಯು 2 ನೇ ಪ್ರತಿವಾದಿ ಹಾಗೂ ಆತನ ಹೆಂಡತಿಯ ಹೆಸರು ಇರುತ್ತದೆಂದು ನುಡಿಯುತ್ತಾರೆ. ನನ್ನ ಮದುವೆಯ ಕಾಲಕ್ಕೆ ನನಗೆ 18 ವರ್ಷ ವಯಸ್ಸು ಆಗಿತ್ತು. ನನ್ನ ಮದುವೆಯನ್ನು ಸಹ 2 ನೇ ಪ್ರತಿವಾದಿ ತನ್ನ ಸ್ವಂತ ಖರ್ಚಿನಿಂದ ಮಾಡಿರುತ್ತಾನೆಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಮದುವೆಯ ಕಾರ್ಡನ್ನು ತೋರಿಸಲಾಗಿ ಅದು ನನ್ನ ಮದುವೆಯ ಕಾರ್ಡು ಆಗಿರುವುದಿಲ್ಲ ಆದರೆ ಅದರಲ್ಲಿ ನನ್ನ ಹೆಸರು ಇರುತ್ತದೆ. ನನ್ನ ಮದುವೆಯ ಕಾರ್ಡನ್ನು ಹಾಜರುಪಡಿಸುತ್ತೇನೆ. ನನ್ನ ಮದುವೆಯ ಕಾಲಕ್ಕೆ ನನ್ನ ತಾಯಿಯ ಬಳಿ ಹಣ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಅರ್ಧ ಎಕರೆ ಜಮೀನನ್ನು ಮಾರಾಟ ಮಾಡಿ ನನ್ನ ಮದುವೆಯನ್ನು ಮಾಡಿರುತ್ತಾಳೆಂದು ನುಡಿಯುತ್ತಾರೆ. ಸದರಿ ಯಾವ ಜಮೀನನ್ನು, ಯಾರಿಗೆ, ಯಾವಾಗ, ಎಷ್ಟು ಮೊತ್ತಕ್ಕೆ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ನಮ್ಮ ದೊಡ್ಡಪ್ಪನಿಗೆ ಮಾರಾಟ ಮಾಡಿದ್ದು, ಉಳಿದ ಸಂಗತಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ಪ್ರತಿಯು ನಮ್ಮ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಸದರಿ ಸಂಗತಿಗಳನ್ನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ನಿಜ.

ದಿ.07.03.2008 ರಂದು ನನ್ನ ಅಜ್ಜ ಶಿವನಾಯಕ ತಾನು 2 ನೇ ಪ್ರತಿವಾದಿಯಿಂದ ಪಡೆದ ಹಣವನ್ನು ಮರಳಿ ಕೊಡಲು ಆಗುವುದಿಲ್ಲ, ಆದ್ದರಿಂದ ಸರ್ವೆ ನಂಬರ 81 ರಲ್ಲಿಯ ಜಮೀನನ್ನು ಆತನಿಗೆ ಮಾರಾಟ ಮಾಡುತ್ತೇನೆಂದು ಹಕ್ಕು ಬಿಟ್ಟ ಪತ್ರ ಬರೆದುಕೊಟ್ಟಿರುತ್ತಾನೆಂದರೆ ಸರಿಯಲ್ಲ. ಸದರಿ ಹಕ್ಕು ಬಿಟ್ಟ ಪತ್ರ ಬರೆದು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಸನ್ 2008 ರಲ್ಲಿ ನನ್ನ ವಯಸ್ಸು 08 ವರ್ಷಗಿಂತ ಕಡಿಮೆ ಇತ್ತು ಎಂದರೆ ನಿಜ.

ನಮ್ಮ ತಾಯಿಯ ಆಸ್ತಿ ನನಗೆ ಬೇಕು ಎಂದು ನಾನು ಪ್ರಸ್ತುತ ದಾವೆಯನ್ನು ಹೂಡಿರುತ್ತೇನೆ. ನನ್ನ ತಾಯಿ ನನ್ನ ಸಮ್ಮತಿ ಪಡೆದುಕೊಂಡು 2ನೇ ಪ್ರತಿವಾದಿಗೆ ಭಕ್ಷಿಸ ಪತ್ರವನ್ನು ಬರೆದುಕೊಟ್ಟಿರುತ್ತಾಳೆಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಹಕ್ಕು, ಹಿತಾಸಕ್ತಿ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯಿಂದ ಹೇಗಾದರೂ ಮಾಡಿ ಹಣ ಪಡೆಯಬೇಕೆಂಬ ದುರುದ್ದೇಶದಿಂದ ಖೊಟ್ಟಿ ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಅಜ್ಜ ಶಿವನಾಯಕ ಮತ್ತು 2 ನೇ ಪ್ರತಿವಾದಿಯ ಮದ್ಯೆ ಆದ ಹಣದ ವ್ಯವಹಾರದ ಬಗ್ಗೆ ನನ್ನ ತಾಯಿಗೆ ಹೆಚ್ಚು ಮಾಹಿತಿ ಇರುತ್ತದೆಂದರೆ ನನಗೆ ಗೊತ್ತಿಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

<u>ಸಾಕ್ಷಿಯ ಸಹಿ</u>